/

ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 583(836) |
| ಸದಸ್ಯರ ಹೆಸರು | ಶ್ರೀ ಎನ್ ಎಸ್ ಭೋಸರಾಜು(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 11-03-2020 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| 1 | ರಾಯಚೂರು ಜಿಲ್ಲೆಯಲ್ಲಿ ಸಿರಿಧಾನ್ಯಗಳ ಉತ್ಪಾದನೆ ಹೆಚ್ಚಿಸಲು ರೈತರಿಗೆ ನೀಡಿರುವ ಸೌಲಭ್ಯಗಳೇನು; | ರಾಯಚೂರು ಜಿಲ್ಲೆಯಲ್ಲಿ ಸಿರಿಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಲು ಕರ್ನಾಟಕ ಸರ್ಕಾರವು ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಂಡಿರುತ್ತದೆ.<br><br>**1. ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ(NFSM): ನ್ಯೂಟ್ರೀಸೀರಿಯಲ್ಸ್(ಜೋಳ ಮತ್ತು ಸಜ್ಜೆ):**<br><br>ಜೋಳ ಮತ್ತು ಸಜ್ಜೆ ಬೆಳೆಗಳನ್ನು ಬೆಳೆಯುವ ರೈತರಿಗೆ ಪ್ರಾತ್ಯಕ್ಷಿಕೆಗಳ ಮುಖಾಂತರ ಪ್ರತಿ ಹೆ.ಗೆ ರೂ. 6000/-ರಂತೆ ಸಹಾಯಧನವನ್ನು ನೇರವಾಗಿ ರೈತರ ಖಾತೆಗೆ ಸಂದಾಯ ಮಾಡುವ ಮೂಲಕ ಸಿರಿಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಲು ರೈತರನ್ನು ಪ್ರೋತ್ಸಾಹಿಸಲಾಗುತ್ತಿದೆ.<br><br>**2. ರೈತಸಿರಿ ಯೋಜನೆ:**<br>ಈ ಯೋಜನೆಯನ್ನು 2019-20 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಸಿರಿಧಾನ್ಯ ಬೆಳೆಗಳಾದ **ನವಣೆ, ಸಾಮೆ, ಹಾರಕ, ಕೊರಲೆ, ಊದಲು ಹಾಗೂ ಬರಗು** ಬೆಳೆಯುವ ರೈತರಿಗೆ ಪ್ರೋತ್ಸಾಹಧನವಾಗಿ ಪ್ರತಿ ಹೆಕ್ಟೇರ್ ರೂ.10,000/- ರಂತೆ ಗರಿಷ್ಠ 2 ಹೆಕ್ಟೇರ್ ಗೆ ಮಾತ್ರ ಸೀಮಿತವಾಗುವಂತೆ ಪ್ರೋತ್ಸಾಹಧನವನ್ನು DBT ಮುಖಾಂತರ ರೈತರ ಖಾತೆಗೆ ವರ್ಗಾವಣೆ ಮಾಡಲಾಗುತ್ತಿದೆ.<br>ಈ ಮೇಲಿನ ಯೋಜನೆಗಳಡಿ ರಾಯಚೂರು ಜಿಲ್ಲೆಯಲ್ಲಿ ಸಾಧಿಸಿರುವ ಪ್ರಗತಿ ಈ ಕೆಳಗಿನಂತಿವೆ. |

| ಕ್ರ ಸಂ | ಯೋಜನೆ | ಭೌತಿಕ (ಹೆಕ್ಟೇರ್) | ಆರ್ಥಿಕ (ಲಕ್ಷಗಳಲ್ಲಿ) | ಫಲಾನುಭವಿಗಳ ಸಂಖ್ಯೆ |
|---|---|---|---|---|
| 1 | NFSM-Nutri cereals**(ಜೋಳ ಮತ್ತು ಸಜ್ಜೆ):** | 1864 | 111.76 | 1715 |
| 2 | ರೈತಸಿರಿ (ನವಣೆ, ಸಾಮೆ, ಹಾರಕ, ಕೊರಲೆ, ಊದಲು ಹಾಗೂ ಬರಗು) | 760 | 76 | 994 |
| ಒಟ್ಟು | | 2624 | 187.76 | 2709 |

| | | |
|---|---|---|
| 2 | ರೈತರು ನೀರನ್ನು ಮಿತವಾಗಿ ಬಳಕೆ ಮಾಡಲು ಸಬ್ಸಿಡಿ ಮೂಲಕ ವಿತರಿಸುವ ಹನಿ ನೀರಾವರಿ ಪದ್ಧತಿ ಯೋಜನೆಯನ್ನು ಎಲ್ಲಾ ವರ್ಗದ ರೈತರಿಗೆ ವಿತರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇಲ್ಲದೇ ಇದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ರೈತರು ನೀರನ್ನು ಮಿತವಾಗಿ ಬಳಕೆ ಮಾಡಲು ಸಬ್ಸಿಡಿ ಮೂಲಕ ವಿತರಿಸುವ ಹನಿ ನೀರಾವರಿ ಪದ್ಧತಿ ಘಟಕಗಳನ್ನು ಎಲ್ಲಾ ವರ್ಗದ ರೈತರಿಗೆ 2.00 ಹೆಕ್ಟೇರ್ ಪ್ರದೇಶದವರೆಗೆ ಶೇ 90 ರ ಸಹಾಯಧನ ಮತ್ತು 2.00 ರಿಂದ 5.00 ಹೆಕ್ಟೇರ್ ಪ್ರದೇಶದವರೆಗೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಲು ಶೇ.45 ರ ಸಹಾಯಧನ ಒದಗಿಸಲಾಗುತ್ತಿದೆ. |

**ಸಂಖ್ಯೆ: ಕೃಇ/ಕೃಇಕ/37/2020**

**(ಬಿ.ಸಿ. ಪಾಟೀಲ್)**
**ಕೃಷಿ ಸಚಿವರು**